ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಡಾ. ಹೆಚ್.ಬಿ. ಪ್ರಭಾಕರ ಶಾಸ್ತ್ರಿ

ಭಾರತ ಒಕ್ಕೂಟ ಮತ್ತು ಇನ್ನೊಬ್ಬರು -ವಿರುದ್ಧ ಬಿ.ಎಮ್. ಉಮಾ

ನಿಯತ ಪ್ರಥಮ ಅಪೀಲುಸಂಖ್ಯೆ: 2041/2010, ದಿನಾಂಕ 19 ನೇ ಸೆಪ್ಟೆಂಬರ್, 2019

ತೀರ್ಪು

ನ್ಯಾಯಮೂರ್ತಿ ಡಾ || ಹೆಚ್.ಬಿ. ಪ್ರಭಾಕರ ಶಾಸ್ತ್ರಿ:

ಇದು ಪ್ರತಿವಾದಿಗಳ ಅಪೀಲಾಗಿದೆ.ವಾದಿಯಾಗಿ ಪ್ರಸ್ತುತ ಪ್ರತಿವಾದಿಯು, ಅಂಚೆ ಜೀವ ವಿಮಾ ಪಾಲಿಸಿಯ ಸಂಬಂಧದಲ್ಲಿನ 60,000/- ರೂ.ಗಳ ಮೊತ್ತವನ್ನು ಅದರ ಮೇಲಿನ ಬಡ್ಡಿ ಸಹಿತ ವಸೂಲು ಮಾಡಿಕೊಡುವುದಕ್ಕಾಗಿ ಒ.ಎಸ್. @ಸಂಖ್ಯೆ: 4391/2005 ರಲ್ಲಿ ಬೆಂಗಳೂರು ನಗರದ 42 ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ (ಸಿಸಿಹೆಚ್.ಸಂಖ್ಯೆ: 43) (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ' ವಿಚಾರಣಾ ನ್ಯಾಯಾಲಯ ' ಎಂದು ಉಲ್ಲೇಖಿಸಲಾಗುವುದು) ನ್ಯಾಯಾಲಯದಲ್ಲಿ ಪ್ರಸ್ತುತ ಅಪೀಲುದಾರರ ವಿರುದ್ಧ ದಾವೆಯನ್ನು ಹೂಡಿದ್ದರು.ದಿನಾಂಕ: 9.7.2010 ರ ವಿಚಾರಣಾ ನ್ಯಾಯಾಲಯದ ತೀರ್ಪಿನ ಮತ್ತು ಡಿಕ್ರಿಯ ಮೂಲಕ ಪ್ರತಿವಾದಿಗಳ ವಿರುದ್ಧ ಸದರಿ ದಾವೆಯು ಡಿಕ್ರಿಯಾಯಿತು.ಸದರಿ ತೀರ್ಪು ಮತ್ತು ಡಿಗ್ರಿಯ ವಿರುದ್ಧ ಪ್ರತಿವಾದಿಗಳು ಈ ಅಪೀಲನ್ನು ಸಲ್ಲಿಸಿದ್ದಾರೆ.

2. ವಿಚಾರಣಾ ನ್ಯಾಯಾಲಯದಲ್ಲಿ ವಾದಿಯ ಮೊಕದ್ದಮೆಯ ಸಾರಾಂಶವೆಂದರೆ-ಶ್ರೀ ಸಿದ್ದರಾಜು (ಮೃತ) ಎಂಬ ಹೆಸರಿನ ವಾದಿಯ ಪತಿಯು ಪ್ರಾದೇಶಿಕ ಸಾರಿಗೆ ಅಧಿಕಾರಿ, ಜಯನಗರ, ಬೆಂಗಳೂರು ಇವರ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರನಿರ್ವಹಿಸುತ್ತಿದ್ದಾಗ, ತಮ್ಮ ಹೆಸರಿಗೆದಿನಾಂಕ: 7.7.1999 ರಂದು ಕೆಟಿ-137067-ಸಿಎಸ್ ಎಂಬ ಪಾಲಿಸಿ ಸಂಖ್ಯೆಯನ್ನು ಹೊಂದಿರುವ 60,000/ ರೂ.ಗಳ ಮೊತ್ತದ ಒಂದು ಅಂಚೆ ಜೀವ ವಿಮಾ ಪಾಲಿಸಿಯನ್ನು ಪಡೆದುಕೊಂಡಿದ್ದನು.ಪಾಲಿಸಿ ಅವಧಿಯುದಿನಾಂಕ: 14.11.2009 ರಂದು ಮುಕ್ತಾಯವಾಗುವುದಿತ್ತು.ಆದರೆ, ವಿಮೆ ಪಡೆದ ಆರ್. ಸಿದ್ದರಾಜುದಿನಾಂಕ: 26.12.2001 ರಂದು ತೀವ್ರ ಹೃದಯಾಘಾತದಿಂದ ಮರಣ ಹೊಂದಿದನು.ಪತ್ನಿಯಾದ ಮತ್ತು ಸದರಿ ವಿಮಾ ಪಾಲಿಸಿಯ ಮೇರೆಗೆ ನಾಮನಿರ್ದೇಶಿತಳಾಗಿದ್ದ ವಾದಿಯು ಕ್ಲೇಮು ಮಾಡಿದಾಗ, ಪ್ರತಿವಾದಿಗಳು (ಇದರಲ್ಲಿನ ಅಪೀಲುದಾರರು) ಆಕೆಯ ಕ್ಲೇಮವನ್ನು ಪುರಸ್ಕರಿಸಲಿಲ್ಲ ಮತ್ತು ಪಾಲಿಸಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಮೃತನು ತನ್ನ ಅನಾರೋಗ್ಯದ ಸಂಗತಿಯನ್ನು ಮುಚ್ಚಿಟ್ಟಿದ್ದು, ತರುವಾಯದ ಹಂತದಲ್ಲಿ ಅದು ತಮ್ಮ ಗಮನಕ್ಕೆ ಬಂದಿತೆಂದು, ಹಾಗಾಗಿ ಸದರಿ ವಿಮಾ ಪಾಲಿಸಿಯು ಅಂಚೆ ಜೀವ ವಿಮಾ ನಿಯಮಗಳ 7ನೇ ನಿಯಮದ ಅಡಿಯಲ್ಲಿ ರದ್ದಾಗಿದೆ ಎಂದು ಪರಿಗಣಿಸಲಾಗಿದೆ ಎಂಬ ಹಿಂಬರಹವನ್ನು ನೀಡಲಾಯಿತು.ಇದನ್ನು ಪ್ರಶ್ನಿಸಿ ಮತ್ತು ಪಾಲಿಸಿ ಮೊತ್ತವನ್ನು ಕ್ಲೇಮು ಮಾಡಿ, ವಾದಿಯು ವಿಚಾರಣಾ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದಳು.

3. ಸಮನ್ಸಳಿಗೆ ಪ್ರತಿಕ್ರಿಯೆಯಾಗಿ, ವಿಚಾರಣಾ ನ್ಯಾಯಾಲಯಕ್ಕೆ 2 ನೆಯ ಪ್ರತಿವಾದಿ ಮಾತ್ರ ಹಾಜರಾಗಿ, ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ.1 ನೆಯ ಪ್ರತಿವಾದಿಯು ಹಾಜರಾಗಿರುವುದಿಲ್ಲ.2 ನೆಯ ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿ, ಜಯನಗರ, ಬೆಂಗಳೂರು ಇಲ್ಲಿ ವಾದಿಯ ಪತಿ ಅಂದರೆ ಮೃತ ಆರ್. ಸಿದ್ದರಾಜು ಕಾವ್ಯನಿರ್ವಹಿಸುತ್ತಿದ್ದಾಗ,ದಿನಾಂಕ: 7.7.1999 ರಂದು 60,000/- ರೂ.ಗಳ ಮೊತ್ತಕ್ಕೆ ತನಗಾಗಿ ಜೀವ ವಿಮಾ ಪಾಲಿಸಿ ರಕ್ಷಣೆಯನ್ನು ಪಡೆದಿದ್ದನೆಂದು ಮತ್ತುದಿನಾಂಕ: 26.12.2001 ರಂದು ಮೃತನಾದನೆಂದು ಒಪ್ಪಿಕೊಂಡಿರುವರಾದರೂ, ಪಾಲಿಸಿಯನ್ನು ತೆಗೆದುಕೊಳ್ಳುವಾಗ ಪ್ರಸ್ತಾವದಲ್ಲಿ ತನ್ನ ಅನಾರೋಗ್ಯದ ಮುಖ್ಯ ಸಂಗತಿಯನ್ನು ಹೇಳದೆ ಮುಚ್ಚಿಟ್ಟಿದ್ದನು ಎಂದು ಹೇಳಿದ್ದಾರೆ.ಹಾಗಾಗಿ ಪ್ರತಿವಾದಿ-ವಿಮಾ ಪ್ರಾಧಿಕಾರಿಯು, ಪಾಲಿಸಿ ಮೇರೆಗೆ ನಾಮನಿರ್ದೇಶಿತಳಾದ ವಾದಿಗೆ ಯಾವುದೇ ಕ್ಲೇಮು ಮೊತ್ತವನ್ನು ಸಂದಾಯ ಮಾಡಲು ತಾವು ಹೊಣೆಗಾರರಲ್ಲವೆಂದು ಹೇಳಿದ್ದಾರೆ.ಪಕ್ಷಕಾರರ ವಾದಗಳನ್ನಾಧರಿಸಿ, ವಿಚಾರಣಾ ನ್ಯಾಯಾಲಯವು ಈ ಮುಂದಿನ ವಿವಾದಗಳನ್ನು ರೂಪಿಸಿದೆ:

"(1) ಪಾಲಿಸಿಸಂಖ್ಯೆ: ಕೌಟಿ-137067-ಸಿಎಸ್ ಇದನ್ನು ತೆಗೆದುಕೊಳ್ಳುವ ಸಂಬಂಧದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸುವಾಗ, ಮೃತ ಆರ್. ಸಿದ್ದರಾಜು ತನ್ನ ಅನಾರೋಗ್ಯ ಸಂಗತಿಯನ್ನು ಅಡಗಿಸಿಟ್ಟಿದ್ದನೆಂಬುದನ್ನು ಪ್ರತಿವಾದಿಸಂಖ್ಯೆ: 2 ಇವರು ಸಾಬೀತುಪಡಿಸಿರುವರೇ?

(2) ಪಾಲಿಸಿ ಮೊತ್ತವನ್ನು ಕ್ಲೇಮು ಮಾಡಲು ವಾದಿಯು ಹಕ್ಕುಳ್ಳವಳಾಗಿಲ್ಲ ಎಂಬುದನ್ನು 2 ನೆಯ ಪ್ರತಿವಾದಿಯ ಸಾಬೀತುಪಡಿಸಿರುವರೇ?

(3) ದಾವೆ ಮೊತದ ವ ಸಲಿಗೆ ವಾ ದಿ ಂ ತ ಹಕ್ಕುಳ್ಳವಳಾಗಿರುವಳೇ?

(4) ಡಿಕ್ರಿ ಅಥವಾ ಆದೇಶ ಏನು?

ತನ್ನ ದಾವೆಗೆ ಸಮರ್ಥನೆಯಾಗಿ ವಾದಿಯು, ಪಿ.ಡಬ್ಲ್ಯು ಇ ಆಗಿ ಸ್ವತಃ ವಿಚಾರಣೆಗೊಳಪಟ್ಟಿದ್ದಾಳೆ ಮತ್ತು ನಿಶಾನೆ ಪಿ .1 ರಿಂದ ಪಿ .20 ಇವುಗಳನ್ನು ಗುರುತಿಸಿದ್ದಾಳೆ.2 ನೆಯ ಪ್ರತಿವಾದಿಯ ಪರವಾಗಿ ಸಹಾಯಕ ವಿಭಾಗೀಯ ವ್ಯವಸ್ಥಾಪಕರಾದ ವೈ.ಇ. ಹೊಂಕನ್ ಎಂಬುವವರನ್ನು ಡಿ.ಡಬ್ಲ್ಯು.ಆಗಿ ವಿಚಾರಣೆಗೊಳಪಟ್ಟಿದ್ದಾರೆ ಮತ್ತು ನಿಶಾನೆ ಡಿ .1 ರಿಂದ ಡಿ .3 ದಾಖಲೆಗಳನ್ನು ಅವರು ಗುರುತಿಸಿದ್ದಾರೆ.ಎರಡೂ ಕಡೆಗಳ ವಾದಗಳನ್ನು ಆಲಿಸಿದ ನಂತರ, ವಿಚಾರಣಾ ನ್ಯಾಯಾಲಯವು,ದಿನಾಂಕ: 9.7.2010 ರ ತನ್ನ ಪ್ರಶ್ನಿತ ತೀರ್ಪು ಮತ್ತು ಡಿಗ್ರಿಯಲ್ಲಿ ವಿವಾದಸಂಖ್ಯೆ: 1 ಮತ್ತು 2 ಇವುಗಳಿಗೆ ನಕಾರಾತ್ಮಕವಾಗಿ ಮತ್ತು ವಿವಾದಸಂಖ್ಯೆ: 3 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದೆ ಹಾಗೂ ಕ್ಲೇಮನ್ನು ನಿರಾಕರಿಸಿದ ದಿನಾಂಕದಿಂದ ಅಂದರೆದಿನಾಂಕ: 10.6.2002 ರಿಂದ ಕ್ಲೇಮು ಮೊತ್ತವನ್ನು ವಸೂಲು ಮಾಡಿಕೊಳ್ಳುವವರೆಗೆ ವಾರ್ಷಿಕ ಶೇಕಡ 6 ರ ದರದಲ್ಲಿ ಬಡ್ಡಿ ಸಹಿತ 60,000/- ರೂ.ಗಳ ಮೊತ್ತವನ್ನು 1 ನೆಯ ಮತ್ತು 2 ನೆಯ ಪತಿವಾದಿಗಳಿಂದ ಇವರಿಂದ ವಸೂಲಿ ಮಾಡಿಕೊಳ್ಳಲು ವಾದಿಯು ಹಕ್ಕುಳ್ಳವಳಾಗಿರುವಳೆಂದು ನಿರ್ಣಯಿಸಿ ವಾದಿಯ ದಾವೆಯನ್ನು ಡಿಗ್ರಿಗೊಳಿಸಿದೆ. ಸದರಿ ತೀರ್ಪು ಮತ್ತು ಡಿಕ್ರಿಯ ವಿರುದ್ಧ ವಿಚಾರಣಾ ನ್ಯಾಯಾಲಯದಲ್ಲಿನ ಪ್ರತಿವಾದಿಗಳು ಈ ಅಪೀಲನ್ನು ಸಲ್ಲಿಸಿದ್ದಾರೆ.

4. ವಿಚಾರಣಾ ನ್ಯಾಯಾಲಯದಿಂದ ದಾಖಲೆಗಳನ್ನು ತರಿಸಿಕೊಂಡು ಈ ನ್ಯಾಯಾಲಯದ ಮುಂದೆ ಮಂಡಿಸಲಾಗಿದೆ.

5. ಎರಡು ಕಡೆಯ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಗಿದೆ ಹಾಗೂ ಅಪೀಲಿನ ವಿವರಣಪತ್ರ ಮತ್ತು ಪ್ರಶ್ನಿತ ತೀರ್ಪನ್ನು ಒಳಗೊಂಡು ಈ ನ್ಯಾಯಾಲಯದ ಮುಂದೆ ಮಂಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದೆ.

6. ಅನುಕೂಲದ ದೃಷ್ಟಿಯಿಂದ, ಪಕ್ಷಕಾರರನ್ನು ವಿಚಾರಣಾ ನ್ಯಾಯಾಲಯದ ಮುಂದಿನ ಅವರ ದರ್ಜೆಗಳಿಗನುಸಾರ ಉಲ್ಲೇಖಿಸಲಾಗುವುದು.

7. ಮೇಲಿನ ಸಂಗತಿಯ ಹಿನ್ನೆಲೆಯಲ್ಲಿ, ಪರಿಗಣನೆಗೆ ಉದ್ಭವಿಸುವ ಅಂಶಗಳೆಂದರೆ:

"1) 2 ನೇ ಪ್ರತಿವಾದಿಯಿಂದ ಪಾಲಿಸಿಯನ್ನು ಪಡೆಯುವಾಗ, ಮೃತ ಆರ್. ಸಿದ್ದರಾಜು ಮುಖ್ಯ ಸ ಂ ಗತಿಯನ್ನು ಮುಚ್ಚಿಟ್ಟಿದ್ದನೆಂಬುದನ್ನು 2 ನೇ ಪ್ರತಿವಾದಿ ಸಾಬೀತುಪಡಿಸಿರುವರೇ? ಮತ್ತು

2) ಅಪೀಲಿನ ಮೇರೆಗಿನ ತೀರ್ಪ ಮತ್ತು ಡಿಗ್ರಿಗಳಲ್ಲಿ ಈ ನ್ಯಾಯಾಲಯ ಹಸ್ತಕ್ಷೇಪ ಮಾಡುವ ಅಗತ್ಯವಿದೆಯೇ? "

8. ಪ್ರಾದೇಶಿಕ ಸಾರಿಗೆ ಕಚೇರಿ, ಜಯನಗರ, ಬೆಂಗಳೂರು ಇಲ್ಲಿ ಮೃತ ಸಿದ್ದರಾಜು ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗ, 60,000/ ರೂ.ಗಳ ಮೊತ್ತಕ್ಕೆ ಎರಡನೇ ಪ್ರತಿವಾದಿಗಳಿಂದ ಅಂಚೆ ಜೀವ ವಿಮಾ ಪಾಲಿಸಿಯನ್ನು ಪಡೆದುಕೊಂಡಿದ್ದನು ಎಂಬುದು ಒಪ್ಪಿಕೊಂಡ ಸಂಗತಿಯಾಗಿದೆ.ಪಾಲಿಸಿಯ ದಿನಾಂಕ 7.7.1999 ಇದ್ದು, ಅದರ ಅವಧಿ ಪೂರ್ಣಗೊಳ್ಳುವ ದಿನಾಂಕ 14.11.2009 ಆಗಿದೆ. ಆತನ ಪತ್ನಿಯಾಗಿರುವ ವಾದಿಯು ಸದರಿ ಪಾಲಿಸಿ ಮೇರೆಗೆ ನಾಮನಿರ್ದೇಶಿತಳಾಗಿದ್ದಳು ಎಂಬುದು ಸಹ ಒಪ್ಪಿಕೊಂಡ ಸಂಗತಿಯಾಗಿದೆ.ಇದಲ್ಲದೆ, ಸದರಿ ಸಿದ್ದರಾಜು/ವಿಮಾದಾರನು ಸದರಿ ಪಾಲಿಸಿಯು ಚಾಲ್ತಿಯಲ್ಲಿರುವಾಗದಿನಾಂಕ: 26.12.2001 ರಂದು ಮೃತನಾದನು ಎಂಬುದು ಸಹ ಒಪ್ಪಿಕೊಂಡ

ಸಂಗತಿಯಾಗಿದೆ.ಒಪ್ಪಿಕೊಂಡಿರುವಂತೆ, ಎರಡನೇ ಪ್ರತಿವಾದಿಯು ವಾದಿಯ ಪತಿಯ ಮರಣಾ ನಂತರ ಆಕೆಯು ತನ್ನ ಹೆಸರಿಗೆ ವಿಮಾ ಪಾಲಿಸಿ ಮೊತ್ತವನ್ನು ಕ್ಲೇಮು ಮಾಡಿ ಸಲ್ಲಿಸಿದ ಕ್ಲೇಮನ್ನು ಎರಡನೇ ಪ್ರತಿವಾದಿಯು ನಿರಾಕರಿಸಿದ್ದಾರೆ.ಎರಡನೇ ಪ್ರತಿವಾದಿಯು ಎಂದರೆ ವಿಮಾ ಪ್ರಾಧಿಕಾರವು ನಿಶಾನೆ ಪಿ .12 ಎಂದು ಗುರುತಿಸಿರುವದಿನಾಂಕ: 10.06.2002 ರ ಅದರ ಪತ್ರದ ಮೂಲಕ ಸದರಿ ಕ್ಲೇಮನ್ನು ನಿರಾಕರಿಸಿದೆ ಎಂಬುದು ಸಹ ನಿರ್ವಿವಾದ ಸಂಗತಿ.ಸದರಿ ನಿಶಾನೆ ಪಿ .12 ರ ಮುಖ್ಯ ಭಾಗವನ್ನು ಈ ಕೆಳಗಿನಂತೆ ಓದಲಾಗಿದೆ:

"ಈ ಕೆಳಗೆ ನಮೂದಿಸಿದ ಕಾರಣಕ್ಕಾಗಿ ನಿಮ್ಮ ಕ್ಲೇಮನ್ನು ಮಾನ್ಯ ಮಾಡಿಲ್ಲವೆಂದು ನಿಮಗೆ ತಿಳಿಸಲು ನಾವು ವಿಷಾದಿಸುತ್ತೇವೆ:

ಪಾಲಿಸಿಯನ್ನು ತೆಗೆದುಕೊಳ್ಳುವ ಮೊದಲು ವಿಮೆದಾರನು ಹೃದ್ರೋಗದಿಂದ ಬಳಲುತ್ತಿದ್ದನೆಂದು ಮತ್ತು ಈ ಸಂಗತಿಯನ್ನು ಪಾಲಿಸಿಯನ್ನು ತೆಗೆದುಕೊಳ್ಳುವಾಗ ಪ್ರಸ್ತಾವ ನಮೂನೆಯ ನಿಗದಿತ ಸ್ಥಳದಲ್ಲಿ ಉಲ್ಲೇಖಿಸಿರಲಿಲ್ಲವೆಂಬುದು ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು ದಕ್ಷಿಣ ಇವರ ವರದಿಯಿಂದ ತಿಳಿದುಬಂದಿರುತ್ತದೆ.

ಆದುದರಿಂದ, ಪಾಲಿಸಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ವಿಮೆದಾರನು ತನ್ನ ಅನಾರೋಗ್ಯದ ಸಂಗತಿಯನ್ನು ಮುಚ್ಚಿಟ್ಟಿದ್ದರಿಂದ 7 ನೇ ನಿಯಮದ ಮೇರೆಗೆ ಪಾಲಿಸಿಯು ರದ್ದಾಗುತ್ತದೆ. " ಮೇಲಿನ ಪತ್ರದ ಸರಿತನವು ಈಗ ಗಂಭೀರ ವಿವಾದವಾಗಿದೆ.

9. ಶಪಥಪತ್ರ (ಅಫಿಡಾವಿಟ್) ಸಾಕ್ಷ್ಯದ ನಮೂನೆಯಲ್ಲಿ ಪಿ.ಡಬ್ಲ್ಯು.1 ತನ್ನ ಮುಖ್ಯ ವಿಚಾರಣೆಯಲ್ಲಿ, ವಾದಪತ್ರದಲ್ಲಿ ಆಕೆ ಮಾಡಿದ ವಾದಗಳನ್ನು ಪುನರುಚ್ಚಿಸಿದ್ದಾಳೆ.ಆದಾಗ್ಯೂ, ನಿಶಾನೆ ಪಿ .12 ನ್ನು ಹಾಜರುಪಡಿಸಿದ ನಂತರ, ಕಾನೂನಿನ ದೃಷ್ಟಿಯಿಂದ ಸದರಿ ಹಿಂಬರವು ನ್ಯಾಯಸಮ್ಮತವಾಗಿರುವುದಿಲ್ಲ ಎಂದು ಅವರು ಹೇಳಿದ್ದಾರೆ.ಪ್ರಾಸಂಗಿಕವಾಗಿ, ನಿಶಾನೆ ಪಿ .12 ರಲ್ಲಿನ ಕ್ಲೇಮು ನಿರಾಕರಣೆ ಪತ್ರವನ್ನು ಹಾಜರುಪಡಿಸುವುದರ ಹೊರತಾಗಿ, ಅದೇ ಸಾಕ್ಷಿದಾರರು ನಿಶಾನೆ ಪಿ .19 ರಲ್ಲಿ ಅಂಚೆ ಜೀವ ವಿಮಾ ಪ್ರಾಧಿಕಾರಕ್ಕೆ ಸಲ್ಲಿಸಿದ ಮೂಲ ಪ್ರಸ್ತಾವನೆಯನ್ನು ಹಾಜರುಪಡಿಸಿದ್ದಾರೆ.

10. ಡಿ.ಡಬ್ಲ್ಯು.1 ಅವರು ತಮ್ಮ ಶಪಥಪತ್ರ ಸಾಕ್ಷ್ಯದಲ್ಲಿ, ಎರಡನೇ ಪ್ರತಿವಾದಿಗಳು ಲಿಖಿತ ಹೇಳಿಕೆಯಲ್ಲಿ ಮಾಡಿದ ವಾದವನ್ನು ಪುನರುಚ್ಚಿಸಿದ್ದಾರೆ.ಪ್ರಾದೇಶಿಕ ಸಾರಿಗೆ ಕಚೇರಿ, ಜಯನಗರ ಇವರಿಂದ ಅವರು ಸ್ವೀಕರಿಸಿದರೆಂದು ಹೇಳಲಾದದಿನಾಂಕ: 26.3.2002 ರ ಸದರಿ ಪತ್ರವನ್ನು ಅವರು ಹಾಜರುಪಡಿಸಿದ್ದಾರೆ ಮತ್ತು ಅದನ್ನು ನಿಶಾನೆ ಡಿ .1 ಎಂದು ಗುರುತಿಸಲಾಗಿದೆ.ನಿಶಾನೆ ಡಿ .2 ರಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿ, ಜಯನಗರ, ಬೆಂಗಳೂರು ಇವರು ನೀಡಿದ ಮೃತ ಸಿದ್ದರಾಜು ಪಡೆದುಕೊಂಡ ವೈದ್ಯಕೀಯ ರಜೆಯ ವಿವರಗಳೆಂದು ಹೇಳಲಾಗಿರುವ ಇನ್ನೂ ಒಂದು ದಸ್ತಾವೇಜನ್ನು ಅವರು ಹಾಜರುಪಡಿಸಿದ್ದಾರೆ.ನಿಶಾನೆ ಡಿ.ಡಿಯಲ್ಲಿರುವ ವಕ್ಹಾರ್ಡ್ ಆಸ್ಪತ್ರೆ ಮತ್ತು ಹಾರ್ಟ್ ಇನ್ಸ್ಟಿಟ್ಯೂಟ್, ಕನ್ನಿಂಗ್ಹ್ಯಾಮ್ ರಸ್ತೆ, ಬೆಂಗಳೂರು ಇವರು ನೀಡಿದ ಶ್ರೀ ಆರ್. ಸಿದ್ದರಾಜುವಿನ ಮರಣ ಪ್ರಮಾಣಪತ್ರದ ಪ್ರತಿಯನ್ನು ಸಹ ಅವರು ಹಾಜರುಪಡಿಸಿದ್ದಾರೆ.

11. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಮಾಡಿದ ಅವರ ವಾದಗಳಲ್ಲಿ, ಪ್ರಸ್ತಾವನಾ ನಮೂನೆಯ ಕಡೆಗೆ ಈ ನ್ಯಾಯಾಲಯದ ಗಮನವನ್ನು ಸೆಳೆಯುವಾಗ, ಅದರಲ್ಲಿನ ಅಂಶ ಸಂಖ್ಯೆ.16 ರಲ್ಲಿ ಪ್ರಸ್ತಾವಕಾರನು/ವಿಮೆದಾರನು, ತನ್ನ ಆರೋಗ್ಯದ ಸ್ಥಿತಿಯ ಬಗ್ಗೆ ಮತ್ತು ಹೆಚ್ಚು ನಿರ್ದಿಷ್ಟವಾಗಿ ಹೃದಯ ಮತ್ತು ಶ್ವಾಸಕೋಶಗಳು, ಮಧುಮೇಹಗಳಂಥ ಯಾವುದೇ ರೋಗಗಳನ್ನು ಒಳಗೊಂಡು ವಿವಿಧ ರೋಗಗಳಿಂದ ಆತನು ಬಳಲುತ್ತಿರುವನೇ ಎಂಬ ಬಗ್ಗೆ ಹಾಗೂ ಆತನು ಉತ್ತಮ ಆರೋಗ್ಯ ಹೊಂದಿರುವುದಾಗಿ ಮತ್ತು ಅಂಥ ಯಾವುದೇ ರೋಗದಿಂದ ಬಳಲುತ್ತಿಲ್ಲವೆಂಬ ವಿವರಗಳನ್ನು ನೀಡಬೇಕಾಗಿತ್ತು; ಅಲ್ಲದೆ ಆತನು, ತಾನು ಉತ್ತಮ ಆರೋಗ್ಯವನ್ನು ಹೊಂದಿರುವುದಾಗಿ, ರೋಗಮುಕ್ತನಾಗಿರುವುದಾಗಿ ಮತ್ತು ಕಳೆದ ಮೂರು ವರ್ಷಗಳಲ್ಲಿ ತಾನು ಯಾವುದೇ ಗಂಭೀರ ರೋಗಗಳನ್ನು ಹೊಂದಿಲ್ಲವೆಂದು ಅಥವಾ ದೊಡ್ಡ ಶಸ್ತ್ರ ಚಿಕಿತ್ಸೆಗೆ ಒಳಗಾಗಿಲ್ಲವೆಂದು ಸಹ ಘೋಷಿಸಬೇಕಿತ್ತು.ಆದಾಗ್ಯೂ, ವಿಮಾ ಪ್ರಾಧಿಕಾರವು ಸಂಗ್ರಹಿಸಿದ ವಿವರಗಳಿಂದ, ನಿರ್ದಿಷ್ಟವಾಗಿ ಆತನು ತೀವ್ರವಾದ ಕೆಳ ಕೋಶ ಹೃದಯ ಸ್ನಾಯುವಿನ ಮುರಿತದಿಂದ (acute inferior wall myocandial intraction) ಬಳಲುತ್ತಿದ್ದನೆಂದು, ಅದು ಹೃದ್ರೋಗವಾಗಿದ್ದು, ಮಧುಮೇಹ ಮೆಲಿಟಸ್ನಿಂದ ಕೂಡಿತ್ತೆಂಬುದನ್ನು ಸಹ ಬಹಿರಂಗಪಡಿಸುತ್ತವೆ.ಹೀಗೆ ಆ ಗಂಭಿರ ರೋಗಗಳನ್ನು ಮುಚ್ಚಿಟ್ಟು ಆತನು ಪಾಲಿಸಿಯನ್ನು

ಪಡೆದುಕೊಂಡಿರುವುದರಿಂದ, ವಿಮಾ ಪ್ರಾಧಿಕಾರದ ನಿಯಮಗಳ ಪ್ರಕಾರ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.ಮಾನ್ಯ ನ್ಯಾಯವಾದಿಗಳು, ಸಂತ್ವಂತ್ ಕೌ ಸಂಧು -ವಿರುದ್ಧ-ನ್ಯೂ ಇಂಡಿಯಾ ಅಶ್ಯುರನ್ಸ್ ಕಂಪನಿ ಅಮಿಟೆಡ್ – (2009) 8 ಎಸ್.ಸಿ.ಸಿ. 316, ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ವರದಿ ಚ ಮಾಡಿದ ತೀರ್ಪನ್ನು ಅವಲಂಬಿಸಿ, ಇಂಥಹುದೇ ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವಿಮಾಕರ್ತವು ಕ್ಲೇಮನ್ನು ನಿರಾಕರಿಸುವಲ್ಲಿ ಚ ನ್ಯಾಯಯುತವಾಗಿ ನಡೆದುಕೊಂಡಿದೆ ಎಂಬುದಾಗಿ ನಿರ್ಣಯಿಸಿದೆ ಎಂದು ನಿವೇದಿಸಿಕೊಂಡಿದ್ದಾರೆ.

12. ಇದಕ್ಕೆ ತದ್ವಿರುದ್ಧವಾಗಿ, ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ತಮ್ಮ ವಾದಗಳಲ್ಲಿ, ನಿಶಾನೆ ಪಿ .19 ನಲ್ಲಿರುವ ಇದೇ ವಿಮಾ ಪ್ರಸ್ತಾವನೆಯಲ್ಲಿ, ವಿಮೆದಾರನ ವರಿಷ್ಠಾಧಿಕಾರಿಗಳು ಎಂದರೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು ದಕ್ಷಿಣ ಇವರು 2 ರಿಂದ 8 ಮತ್ತು 10 ನೇ ಪ್ರಶ್ನೆಗಳಲ್ಲಿ ಪ್ರಸ್ತಾವಕಾರನು ಒದಗಿಸಿದ ಮಾಹಿತಿಯನ್ನು ಪರಿಶೀಲಿಸಲಾಗಿದ್ದು, ಸರಿ ಇರುವುದಾಗಿ ಕಂಡುಬಂದಿದೆ ಎಂದು ಪ್ರಮಾಣೀಕರಿಸಿದ್ದಾರೆ; ಹಾಗಾಗಿ, ಯಾವುದೇ ವಾಸ್ತವಾಂಶವನ್ನು ಅಡಗಿಸಿಡಲಾಗಿತ್ತು ಎಂದು ಹೇಳಲಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ ಅವರು, ಇದರ ಹೊರತಾಗಿ, ನಿಶಾನೆ ಪಿ .19 ರಲ್ಲಿರುವ ಅದೇ ಪ್ರಸ್ತಾವನಾ ನಮೂನೆಯಿಂದ, ಮೃತನನ್ನು ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ವೈದ್ಯಕೀಯ ಶಸ್ತ್ರ ಚಿಕಿತ್ಸಕರು ಸಹ ಪರೀಕ್ಷಿಸಿದ್ದು, ಅವರು, ವಿಮಾ ಪಾಲಿಸಿಯನ್ನು ಪಡೆದುಕೊಳ್ಳುವ ಆತನ ವೈದ್ಯಕೀಯ ಅರ್ಹತೆಯ ಬಗ್ಗೆ ಪ್ರಮಾಣಪತ್ರವನ್ನು ಸಹ ನೀಡಿರುವರೆಂದು; ಹೀಗಿರುವಾಗ, ವಿಮೆದಾರನು ಕೆಲವು ಚಿಕಿತ್ಸೆಗೊಳಗಾಗಿದ್ದನು ಮತ್ತು ಪಾಲಿಸಿ ದಿನಾಂಕಕ್ಕೆ ಮೊದಲು ಸುಮಾರು 3 ವರ್ಷಗಳ ಕಾಲ ವೈದ್ಯಕೀಯ ರಜೆಯನ್ನು ಪಡೆದುಕೊಂಡಿದ್ದನು ಎಂಬ ಕಾರಣ ಮಾತ್ರದಿಂದ, ಮುಖ್ಯ ಸಂಗತಿಯನ್ನು ಮುಚ್ಚಿಡಲಾಗಿತ್ತು ಎಂದು ನಿರ್ಣಯಿಸಲಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.

13. ವಿಮೆ ಒಪ್ಪಂದವು ಸಂಪೂರ್ಣ ನಂಬಿಕೆಯ ಒಪ್ಪಂದವಾಗಿದೆ.ಅದರರ್ಥ, ಇದು ಅತ್ಯಂತ ಸದ್ಭಾವನೆಯ ಒಪ್ಪಂದವಾಗಿದೆ.ಹಾಗಾಗಿ, ವಿಮೆ ಒಪ್ಪಂದವನ್ನು ಮಾಡಿಕೊಳ್ಳುವಾಗ, ತನ್ನ ಜೀವಕ್ಕೆ ವಿಮಾ ಪಾಲಿಸಿ ರಕ್ಷಣೆ ಕೋರಿ ಪ್ರಸ್ತಾವಕಾರನಿಗೆ ತನ್ನ ಪ್ರಸ್ತಾವನೆಯನ್ನು ನೀಡುವ ವಿಮಾದಾರನು, ವಿಮಾ ಪಾಲಿಸಿಯನ್ನು ಅನ್ವಯಿಸಲಾಗಲಿ ಅಥವಾ ಅನ್ವಯಸದಿರಲಾಗಲಿ ಅಥವಾ ವಿಮಾ ಕಂತನ್ನು ನಿಗದಿಪಡಿಸಲಾಗಲಿ ವಿಮೆದಾರನಿಗೆ ಸುಸಂಗತವಾಗಿರುವ ಎಲ್ಲಾ ಮುಖ್ಯ ಸಂಗತಿಗಳನ್ನು ಬಹಿರಂಗಪಡಿಸಬೇಕಾಗುತ್ತದೆ.ಆ ಯಾವುದೇ ಮುಖ್ಯ ಸಂಗತಿಗಳನ್ನು ಮುಚ್ಚಿಟ್ಟರೆ, ಆಗ ಪಾಲಿಸಿಯನ್ನು ನಿರಾಕರಿಸಲು ಅಥವಾ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ಅವರ ನಡುವಿನ ವಿಮಾ ಒಪ್ಪಂದವನ್ನು ನಿಯಂತ್ರಿಸಲು ವಿಮಾಕರ್ತನಿಗೆ ಹಕ್ಕನ್ನು ನೀಡಬಹುದು.ಪ್ರಸ್ತುತ ಮೊಕದ್ದಮೆಯಲ್ಲಿ, ಒಪ್ಪಿಕೊಂಡಿರುವಂತೆ, ಅಂಚೆ ಜೀವ ವಿಮಾ ನಿಧಿ ನಿಯಮಗಳ ಮೇರೆಗೆ ಸಿದ್ದರಾಜುವಿಗೆ (ಮೃತ) ವಿಮಾ ಪಾಲಿಸಿಯನ್ನು ನೀಡಲಾಗಿತ್ತು.ಅಂಚೆ ಜೀವ ವಿಮಾ ನಿಯಮಗಳ 7 ನೇ ನಿಯಮವನ್ನು ಈ ಕೆಳಗಿನಂತೆ ಓದಲಾಗಿದೆ:

"ನಿಯಮ 7:ಅಂಚೆ ಕಚೇರಿ ವಿಮಾ ನಿಧಿಯ ಪ್ರಯೋಜನಗಳಿಗೆ ಒಪ್ಪಿಕೊಂಡ ವ್ಯಕ್ತಿಯು ಒದಗಿಸಿದ ನಿಖರವಲ್ಲದ ಮಾಹಿತಿಯು,

(ಎ)* ಪೋಸ್ಟ್ ಮಾಸ್ಟರ್ ಜನರಲ್ ವಿವೇಚನೆಯಂತೆ, ಆ ವ್ಯಕ್ತಿಯೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಅಸಿಂಧು ಗೊಳಿಸುವುದಕ್ಕೆ ಮತ್ತು ಆತನು ಮಾಡಿದ ಎಲ್ಲಾ ಹಣ ಸಂದಾಯಗಳ ಮುಟ್ಟುಗೋಲು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ;

(ಬಿ) ಆ ವ್ಯಕ್ತಿಯು ಸರ್ಕಾರಿ ಸೇವೆಯಲ್ಲಿದ್ದರೆ ಮತ್ತು ಅಂಥ ಮಾಹಿತಿಯನ್ನು ಗೊತ್ತಿದ್ದೂ ಒದಗಿಸಿದ್ದರೆ, ಆತನು ಸೇವೆಯಿಂದ ವಜಾಗೊಳ್ಳುವನು. "

ಮೇಲಿನ 7 ನೇ ನಿಯಮದ ಪ್ರಕಾರ, ಅಂಚೆ ಕಚೇರಿ ವಿಮಾ ನಿಧಿಯ ಪ್ರಯೋಜನಕ್ಕೆ ಒಪ್ಪಿಕೊಂಡ ವ್ಯಕ್ತಿಯು ಒದಗಿಸಿದ ಯಾವುದೇ ನಿಖರವಲ್ಲದ ಮಾಹಿತಿಯು, ಪೋಸ್ಟ್ ಮಾಸ್ಟರ್ ಜನರಲ್ರು ವಿವೇಚನೆಯನುಸಾರ ಅಸಿಂಧುವಾಗುವುದು ಮತ್ತು ಆತನು ಮಾಡಿದ ಎಲ್ಲಾ ಹಣ ಸಂದಾಯಗಳ ಮುಟ್ಟುಗೋಲಿಗೆ ಸಹ ಕಾರಣವಾಗುವುದು.ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರತಿವಾದಿಗಳ ಪ್ರಕಾರ, ವಿಮಾದಾರ ಮೃತ ಸಿದ್ದರಾಜುವಿನ

ಆರೋಗ್ಯ ಸ್ಥಿತಿಗತಿಯ ಬಗೆಗಿನ ಮುಖ್ಯ ಸಂಗತಿಗಳನ್ನು ಅಡಗಿಸಿಡಲಾಗಿದ್ದು, ಮೃತನ ಪತ್ನಿ ಅಂದರೆ ವಾದಿಯು ಅದನ್ನು ಕ್ಲೇಮು ಮಾಡಿದಾಗ ಅದು ವಿಮಾ ಪ್ರಾಧಿಕಾರದ ಗಮನಕ್ಕೆ ಬಂದಿದೆ.ಹಾಗಾಗಿ, ಎರಡನೇ ಪ್ರತಿವಾದಿ ಸಂಸ್ಥೆಯು, ಮೇಲಿನ ಸದರಿ 7 ನೇ ನಿಯಮದ ಮೇರೆಗೆ ತನ್ನ ಅಧಿಕಾರವನ್ನು ಚಲಾಯಿಸಿ ವಾದಿಯ ಕ್ಲೇಮನ್ನು ನಿರಾಕರಿಸಿದೆ.

14. ಮುಖ್ಯವಾಗಿ ವಿಮಾ ಪಾಲಿಸಿಯನ್ನು ನೀಡಲು ವಿಮಾಕರ್ತನಿಗೆ ಆಧಾರವಾಗಿರುವ ಅಂಚೆ ಜೀವ ವಿಮೆಗೆ ಸಂಬಂಧಿಸಿದ ಪ್ರಸ್ತಾವನೆಯು ನಿಶಾನೆ ಪಿ .19 ರಲ್ಲಿದೆ.ಸದರಿ ದಸ್ತಾವೇಜನ್ನು ವಿಮಾದಾರನು ಭರ್ತಿ ಮಾಡಿ ವಿಮಾಕರ್ತನಿಗೆ ಸಲ್ಲಿಸಬೇಕಿರುತ್ತದೆ.ವಿಮಾದಾರನ ಹೆಸರು, ಉದ್ಯೋಗ, ವಿಳಾಸ, ವಯಸ್ಸು ಮುಂತಾದ ವಿವರಗಳನ್ನು ಒಳಗೊಂಡ ಮಾಹಿತಿಯನ್ನು ಒದಗಿಸಬೇಕೆಂದು ಹಲವಾರು ವಿವರಗಳಲ್ಲಿ ವಿಮಾಕರ್ತನು ಅಗತ್ಯಪಡಿಸಿದ್ದು, ಅವು 1 ರಿಂದ 10 ರವರೆಗಿನ ಕ್ರಮ ಸಂಖ್ಯೆಗಳಲ್ಲಿವೆ.ಇವುಗಳೊಂದಿಗೆ ಹೆಚ್ಚುವರಿಯಾಗಿ, ಇದೇ ಪ್ರಸ್ತಾವನೆಯ ಕ್ರಮ ಸಂಖ್ಯೆ 16 ರಲ್ಲಿನ ವೈಯಕ್ತಿಕ ಮಾಹಿತಿ ' ಶೀರ್ಷಿಕೆ ಅಡಿಯಲ್ಲಿ, ಪ್ರಸ್ತಾವಕಾರನು ಉತ್ತಮ ಆರೋಗ್ಯವನ್ನು ಹೊಂದಿರುವನೇ ಎಂಬುದನ್ನು ಹೇಳಬೇಕೆಂದು ಆತನಿಗೆ ಅಗತ್ಯಪಡಿಸಿ, ಆತನು ( i) ಕ್ಷಯ(ii) ಕ್ಯಾನ್ಸರ್(iii) ಪಾರ್ಶ್ವ(iv) ಬುದ್ಧಿಭ್ರಮಣೆ ( v) ಹೃದಯ ಮತ್ತು ಶ್ವಾಸಕೋಶ ಸಂಬಂಧಿ ಯಾವುದೇ ರೀತಿಯ ಕಾಯಿಲೆ(vi) ಮೂತ್ರಪಿಂಡ ಸಂಬಂಧಿ ಕಾಯಿಲೆ(vii) ಮೆದುಳಿಗೆ ಸಂಬಂಧಿಸಿದ ಯಾವುದೇ ಕಾಯಿಲೆ (viii) ಮಧುಮೇಹ(ix) ತೀವ್ರ ಭಾವೋದ್ವೇಗ ( x) ಯಾವುದೇ ಇತರ ಗಂಭೀರ ಕಾಯಿಲೆ(xi) ಅಂಗವಿಕಲತೆಯ ಯಾವುದೇ ರೀತಿಯ ದೈಹಿಕ ವಿರೂಪಗಳಂಥ ಯಾವುದೇ ಕಾಯಿಲೆಗಳಿಂದ ಬಳಲುತ್ತಿರುವನೇ ಎಂಬ ಬಗ್ಗೆ ಆತನನ್ನು ಕೇಳಲಾಗಿದೆ.

ಒಪ್ಪಿಕೊಂಡಿರುವಂತೆ, ಪ್ರಸ್ತುತ ಮೊಕದ್ದಮೆಯಲ್ಲಿನ ಪ್ರಸ್ತಾವಕಾರ ಎಂದರೆ ಮೃತ ಸಿದ್ದರಾಜು ತಾನು ಉತ್ತಮ ಆರೋಗ್ಯ ಹೊಂದಿರುವುದಾಗಿ ಮತ್ತು ಮೇಲೆ ಹೇಳಿದ ಯಾವುದೇ ಕಾಯಿಲೆಗಳಿಂದ ತಾನು ಬಳಲುತ್ತಿರುವ ಬಗೆಗಿನ ವಿವರಗಳ ಸಂಬಂಧದಲ್ಲಿ 11 ಇಲ್ಲ ' ಎಂದು ಉಲ್ಲೇಖಿಸಿದ್ದಾನೆ.ಅದರರ್ಥ, ಆತನು ಆ ಯಾವುದೇ ಕಾಯಿಲೆಗಳಿಂದ ಬಳಲುತ್ತಿರಲಿಲ್ಲವೆಂದು ಆತನು ಘೋಷಿಸಿದ್ದಾನೆ ಎಂಬುದಾಗಿದೆ.ಅದೇ ಪ್ರಸ್ತಾವನೆಯ ಕೊನೆಯಲ್ಲಿ, ಪ್ರಸ್ತಾವಕಾರನು ಒಂದು ಘೋಷಣೆಯನ್ನು ಬರೆಯುವ ಅಗತ್ಯವಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

" ಈ ಮೂಲಕ ನಾನು ಘೋಷಿಸುವುದೇನೆಂದರೆ, ನಾನು ಆರೋಗ್ಯವಂತನಾಗಿದ್ದು, ಕಾಯಿಲೆಗಳಿಂದ ಮುಕ್ತನಾಗಿರುವೆ, ಕಳೆದ ಮೂರು ವರ್ಷಗಳಿಂದ ನನಗೆ ಯಾವುದೇ ಗಂಭೀರ ಅನಾರೋಗ್ಯವಿಲ್ಲ ಅಥವಾ ದೊಡ್ಡ ಶಸ್ತ್ರಚಿಕಿತ್ಸೆಯಾಗಿಲ್ಲ ಹಾಗೂ ನನ್ನ ಜೀವದ ಮೇಲಿನ ಯಾವುದೇ ವಿಮಾ ಪ್ರಸ್ತಾವನೆಯನ್ನು ಎಂದಿಗೂ ಪ್ರತಿಕೂಲವಾಗಿ ಪರಿಗಣಿಸಿರುವುದಿಲ್ಲ."

15. ಪ್ರಸ್ತಾವಕಾರ ಮೃತ ಸಿದ್ದರಾಜು ಸದರಿ ಘೋಷಣೆಯನ್ನು ಸಹ ಬರೆದುಕೊಟ್ಟಿದ್ದಾನೆ.ಇದೇ ಪ್ರಸ್ತಾವನಾ ನಮೂನೆಯ ತರುವಾಯದ ಭಾಗಗಳು, ವಿಮಾದಾರನ ನಿಕಟ ವರಿಷ್ಠಾಧಿಕಾರಿಯು ನೀಡಿದ ಪ್ರಮಾಣಪತ್ರವನ್ನು ಒಳಗೊಂಡಿದೆ.ಪ್ರಸ್ತುತ ಮೊಕದ್ದಮೆಯಲ್ಲಿ, ಬೆಂಗಳೂರು ದಕ್ಷಿಣ ಪ್ರಾದೇಶಿಕ ಸಾರಿಗೆ ಅಧಿಕಾರಿಯು, 2 ರಿಂದ 8 ರವರೆಗಿನ ಮತ್ತು 10 ನೇ ನಿಶಾನೆಗಳಲ್ಲಿ ಒದಗಿಸಿದ ಮಾಹಿತಿಯನ್ನು ಪರಿಶೀಲಿಸಲಾಗಿದ್ದು, ಆತನು/ಆಕೆಯು ನೀಡಿದ ಮಾಹಿತಿ ಸರಿಯಾಗಿದೆ ಎಂದು ಕಂಡುಬಂದಿದೆ ಎಂಬುದಾಗಿ ಸದರಿ ಪ್ರಮಾಣಪತ್ರವನ್ನು ಬರೆದಿದ್ದಾರೆ.ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ಪ್ರಸ್ತಾವಕಾರನ ನಿಕಟ ವರಿಷ್ಠಾಧಿಕಾರಿಯು ನೀಡಿದ ಸದರಿ ಪ್ರಮಾಣಪತ್ರದ ಕಡೆಗೆ ಈ ನ್ಯಾಯಾಲಯದ ಗಮನವನ್ನು ಸೆಳೆಯುವಾಗ ಮಾಡಿದ ಅವರ ವಾದಗಳಲ್ಲಿ, ಯಾವುದೇ ಮುಖ್ಯ ಸಂಗತಿಯನ್ನು ಅಡಗಿಸಿಲ್ಲವೆಂದು ಸದರಿ ಪ್ರಮಾಣಪತ್ರದಿಂದ ತಿಳಿದುಬರುತ್ತದೆ ಮತ್ತು ನಿಕಟ ವರಿಷ್ಠಾಧಿಕಾರಿಗಳು/ನಿಯೋಜಕರು, ಪ್ರಸ್ತಾವನೆಯ ಅಂಶಗಳು ಸತ್ಯವಾಗಿದ್ದು, ಮೃತನು ಯಾವುದೇ ಅನಾರೋಗ್ಯದಿಂದ ಬಳಲುತ್ತಿರಲಿಲ್ಲವೆಂದು ಪ್ರಮಾಣೀಕರಿಸಿದ್ದಾರೆ ಎಂದು ಹೇಳಿದ್ದಾರೆ.8 ರಿಂದ 10 ರವರೆಗಿನ ಪ್ರಶ್ನೆಗಳಿಗೆ ನೀಡಿದ ಉತ್ತರಗಳ ಸರಿತನದ ಬಗ್ಗೆ ಸದರಿ ಪ್ರಮಾಣಪತ್ರವು ಸ್ವತಃ ಸೀಮಿತವಾಗಿಲ್ಲವೆಂಬ ಕಾರಣಕ್ಕಾಗಿ ಸದರಿ ವಾದವನ್ನು ಒಪ್ಪಲಾಗಿಲ್ಲವಾದರೂ, ಅವರು ವಿವಿಧ ಕಾಯಿಲೆಗಳಿಂದ ಬಳಲುತ್ತಿದ್ದ ಬಗ್ಗೆ ಅವರ ಆರೋಗ್ಯದ ಹಿನ್ನೆಲೆಯನ್ನು ಒಳಗೊಂಡ ಅವರ ಆರೋಗ್ಯದ ಸ್ಥಿತಿಗತಿಗೆ ಸಂಬಂಧಿಸಿದ ಪ್ರಶ್ನಾವಳಿಯು ಕ್ರಮ ಸಂಖ್ಯೆ 16 ರಲ್ಲಿನ ಪ್ರತ್ಯೇಕ ಪ್ರಶ್ನೆಯಲ್ಲಿದೆ. ಹಾಗಾಗಿ,

ಪ್ರಸ್ತಾವನಾ ನಮೂನೆಯಲ್ಲಿ ಪ್ರಸ್ತಾವಕಾರನು ನೀಡಿದ ಕ್ರಮ ಸಂಖ್ಯೆ 16 ರಲ್ಲಿನ ವೈಯಕ್ತಿಕ ಹಿನ್ನೆಲೆಗೆ ಸದರಿ ಪ್ರಮಾಣಪತ್ರವು ಯಾವುದೇ ರೀತಿಯಲ್ಲೂ ಸಂಬಂಧಿಸಿರುವುದಿಲ್ಲ.

16. ವಾದಿಯ/ಪ್ರತಿವಾದಿಯ ಕಡೆಯಿಂದ ಸಾಕ್ಷ್ಯದಲ್ಲಿ ಮಂಡಿಸಿದ ಎರಡನೇ ಅಂಶವು, ಅದೇ ಪ್ರಸ್ತಾವನೆಯ ಕೆಳ ಭಾಗದಲ್ಲಿ ವೈದ್ಯಕೀಯ ಶಸ್ತ್ರಚಿಕಿತ್ಸಕರು ನೀಡಿದ ವೈದ್ಯಕೀಯ ಪ್ರಮಾಣಪತ್ರವನ್ನು ಕುರಿತಾಗಿದೆ.ಸರ್ಕಾರಿ ಆಸ್ಪತ್ರೆಯ ವೈದ್ಯಕೀಯ ಸರ್ಜನ್ ಅವರು ನಿರ್ವಿವಾದವಾಗಿ ನೀಡಿರುವ ಸದರಿ ವೈದ್ಯಕೀಯ ಪ್ರಮಾಣಪತ್ರವು ಈ ಕೆಳಗಿನಂತಿದೆ:

" ಇಂದು ಬೆಳಿಗ್ಗೆದಿನಾಂಕ: 30.06.99 ರಂದು, ಕೆಳಗೆ ಸಹಿ ೧ ಮಾಡಿದ ಪ್ರಸ್ತಾವಕಾರ ಶ್ರೀ ಆರ್. ಸಿದ್ದರಾಜು ಈತನನ್ನು ನಾನು ಜಾಗರೂಕತೆಯಿಂದ ಪರೀಕ್ಷಿಸಿದ್ದೇನೆ.ಪ್ರಸ್ತಾವಕಾರ ಶ್ರೀ ಆರ್. ಸಿದ್ದರಾಜು ವೈದ್ಯಕೀಯವಾಗಿ ಅರ್ಹರಿರುವರು.ಪೋಸ್ಟ್ ಮಾಸ್ಟರ್ ಜನರಲ್ ಅವರು ಅಂಚೆ ಜೀವ ವಿಮಾ ಪಾಲಿಸಿಗೆ ಸಲ್ಲಿಸಿದ ಈ ಪ್ರಸ್ತಾವದ ಅಂಗೀಕಾರಕ್ಕೆ ನಾನು ಶಿಫಾರಸ್ಸು ಮಾಡುತ್ತೇನೆ. "

ಮೇಲೆ ಹೇಳಿದ ಪ್ರಮಾಣಪತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಪ್ರಸ್ತಾವನಾ ನಮೂನೆಯ ಕ್ರಮ ಸಂಖ್ಯೆ 16 ರಲ್ಲಿ ಉಲ್ಲೇಖಿಸಿದ ಯಾವುದೇ ಕಾಯಿಲೆಗಳಗಳಿಂದ ಪ್ರಸ್ತಾವಕಾರನು ಬಳಲುತ್ತಿರಲಿಲ್ಲವೆಂದು ವೈದ್ಯರು ಎಲ್ಲಿಯೂ ಪ್ರಮಾಣೀಕರಿಸಿರುವುದಿಲ್ಲವೆಂಬುದು ಕಂಡುಬರುತ್ತದೆ.ಪ್ರಸ್ತಾವಕಾರನು ವೈದ್ಯಕೀಯವಾಗಿ ಅರ್ಹನಿರುವನೆಂದು ಮತ್ತು ಆತನ ಪ್ರಸ್ತಾವವನ್ನು ಅಂಗೀಕರಿಸಬಹುದೆಂದು ಅವರು ಶಿಫಾರಸ್ಸು ಮಾಡಿದ್ದಾರೆ.ವೈದ್ಯಕೀಯ ಅರ್ಹತೆ ಕುರಿತ ಸದರಿ ಪ್ರಮಾಣಪತ್ರವು, ವಿಮಾ ಪಾಲಿಸಿಯನ್ನು ನಿರಾಕರಿಸುವುದಕ್ಕೆ ಯಾವುದೇ ಕಾರಣವಿಲ್ಲವೆಂಬುದನ್ನು ತಿಳಿಸುತ್ತದೆ.ಆದರೆ, ಯಾವುದೇ ರೀತಿಯಲ್ಲೂ, ಅದೇ ನಮೂನೆಯಲ್ಲಿನ ಕ್ರಮ ಸಂಖ್ಯೆ 16 ರಲ್ಲಿ ಪಟ್ಟಿ ಮಾಡಲಾಗಿರುವ ಯಾವುದೇ ಅನಾರೋಗ್ಯಗಳಿಂದ ಅಥವಾ ಕಾಯಿಲೆಗಳಿಂದ ಪ್ರಸ್ತಾವಕಾರನು ಮುಕ್ತನಾಗಿರುವನೆಂದು ಅದು ಪ್ರಮಾಣೀಕರಿಸಿದೆ ಎಂಬುದಾಗಿ ಅದನ್ನು ಅರ್ಥೈಸಬೇಕಾಗಿಲ್ಲ.

ಆ ಸಂದರ್ಭದಲ್ಲಿ ವೈದ್ಯಕೀಯ ಪ್ರಮಾಣಪತ್ರದ ಸದರಿ ಅರ್ಥೈಸುವಿಕೆಯು ಸಹ, ಮಧುಮೇಹ ಅಥವಾ ಹೃದಯ ಸಂಬಂಧಿ ಅನಾರೋಗ್ಯದಿಂದ ಬಳಲುತ್ತಿರುವ ವ್ಯಕ್ತಿಯ ಜೀವದ ಮೇಲಿನ ಯಾವುದೇ ವಿಮಾ ರಕ್ಷಣೆಯಿಂದ ಆತನನ್ನು ಪ್ರತಿರೋಧಿಸಬೇಕು ಅಥವಾ ತಡೆಯಬೇಕು ಎಂಬುದು ವಾಸ್ತವವಲ್ಲವೆಂಬ ಕಾರಣದಿಂದ ಸಮರ್ಥಿತವಾಗುವುದಿಲ್ಲ.ಆದಾಗ್ಯೂ, ಅಸ್ವಸ್ಥತೆ ಅಥವಾ ಗಂಭೀರ ಅನಾರೋಗ್ಯಗಳು ಯಾವುವಾದರೂ ಇದ್ದರೆ, ಅವುಗಳನ್ನು ಒಳಗೊಂಡು ಪ್ರಸ್ತಾವಕಾರನ ಆರೋಗ್ಯದ ಸ್ಥಿತಿಗತಿಯ ಬಗ್ಗೆ ವಿಮೆದಾರನು ವಿಮಾಕರ್ತನಿಗೆ ಬಹಿರಂಗಪಡಿಸುವಂಥ ಸಂದರ್ಭದಲ್ಲಿ, ಆತನ ಜೀವದ ಮೇಲಿನ ವಿಮಾ ಪಾಲಿಸಿಯ ಪ್ರಯೋಜನವನ್ನು ಅನ್ವಯಿಸದಿರಲು ವಿಮಾಕರ್ತನು ಯೋಚಿಸಬಹುದು ಅಥವಾ ಪ್ರಸ್ತಾವಕಾರನು/ವಿಮೆದಾರನು ಸಂದಾಯ ಮಾಡಬಹುದಾದ ವಿಮಾ ಕಂತನ್ನು ಮರು ನಿಗದಿಪಡಿಸುವುವನ್ನು ಪರಿಗಣಿಸಬಹುದು.ವಿಮಾ ಒಪ್ಪಂದವು ನಷ್ಟಭರ್ತಿ ಒಪ್ಪಂದವಾಗಿದ್ದು, ಅದರಡಿ ವಿಮಾಕರ್ತನು, ಭವಿಷ್ಯದಲ್ಲಿ ವಿಮೆದಾರನು ಎದುರಿಸುವ ಅಪಾಯಸಾಧ್ಯತೆ ಅಥವಾ ನಷ್ಟವನ್ನು ಭರಿಸುತ್ತಾನೆ.ಆದುದರಿಂದ, ಅಪಾಯಸಾಧ್ಯತೆಯ ಪ್ರಮಾಣ ಅಥವಾ ಪರಿಮಾಣವನ್ನು ವಿಶ್ಲೇಷಿಸಲು ಮತ್ತು ನಿಶ್ಚಿತಪಡಿಸಿಕೊಳ್ಳಲು, ವಿಮಾ ರಕ್ಷಣೆಯನ್ನು ಒದಗಿಸಲು ಅಥವಾ ವಿಮಾ ಕಂತನ್ನು ನಿಗದಿಪಡಿಸಲು ವಿಮಾಕರ್ತನಿಗೆ ಅತ್ಯಂತ ಅವಶ್ಯಕ ಮತ್ತು ಅಗತ್ಯವಾಗಿರುವ ಎಲ್ಲಾ ಮುಖ್ಯ ಸಂಗತಿಗಳನ್ನು ವಿಮೆದಾರನು ಬಹಿರಂಗಪಡಿಸಬೇಕೆಂದು ನಿರೀಕ್ಷಿಸಲಾಗುತ್ತದೆ.ಆದುದರಿಂದ, ವೈದ್ಯರು ವಿಮಾ ಪಾಲಿಸಿಯನ್ನು ಅನ್ವಯಿಸಬಹುದೆಂದು ಶಿಫಾರಸ್ಸು ಮಾಡಿರುವರೆಂದು ಹೇಳಿದ ಮಾತ್ರಕ್ಕೆ, ಅದರಿಂದಲೇ ವಿಮೆ ಪಡೆದ ಮೃತ ಸಿದ್ದರಾಜು ಪ್ರಸ್ತಾವನಾ ನಮೂನೆಯಲ್ಲಿ ಮುಖ್ಯ ಸಂಗತಿಗಳನ್ನು ಅಡಗಿಸಿರುವನೆಂದು ಹೇಳಲಾಗಿರುವ ಮಧುಮೇಹ ಅಥವಾ ಹೃದ್ರೋಗದಂಥ ಯಾವುದೇ ಅನಾರೋಗ್ಯದಿಂದ ಆತನು ಮುಕ್ತನಾಗಿರುವನೆಂಬ ತೀರ್ಮಾನಕ್ಕೆ ಬರಲಾಗುವುದಿಲ್ಲ.

17. ಪರಿಗಣನೆಗೆ ಉಳಿಯುವ ಮುಂದಿನ ಅಂಶವೆಂದರೆ, ಪ್ರಸ್ತಾವಕಾರ ಸಿದ್ದರಾಜು ಮಧುಮೇಹ ಮತ್ತು ಹೃದ್ರೋಗದಂಥ ಯಾವುದೇ ಅನಾರೋಗ್ಯದಿಂದ ಬಳಲುತ್ತಿದ್ದನೇ ಹಾಗೂ ಅದನ್ನು ವಿಮಾಕರ್ತನ ಗಮನಕ್ಕೆ ತರದೆ ಅದನ್ನು ಅಡಗಿಸಿಟ್ಟಿದ್ದನೇ ಎಂಬುದಾಗಿದೆ.

18. ಒಪ್ಪಿಕೊಂಡಿರುವಂತೆ, ಒಬ್ಬ ವ್ಯಕ್ತಿಗೆ ಜೀವ ವಿಮಾ ರಕ್ಷಣೆ ಒದಗಿಸುವ ವಿಮಾ ಪಾಲಿಸಿಯಲ್ಲಿ ಆ ವ್ಯಕ್ತಿಯ ಆರೋಗ್ಯ ಸ್ಥಿತಿಗತಿಗೆ ಸಂಬಂಧಿಸಿದ ಮಾಹಿತಿಯ ವಿವರಗಳು ಅತ್ಯಂತ ಮುಖ್ಯ ಮತ್ತು ಅತ್ಯಗತ್ಯವಾಗಿವೆ; ಹಾಗಾಗಿ, ಅಂಥ ಸಂಗತಿಗಳನ್ನು ವಿಮಾದಾರನು ಪಾಲಿಸಿಯನ್ನು ಪಡೆಯುವ ಸಮಯದಲ್ಲಿ ವಿಮಾಕರ್ತನಿಗೆ ಬಹಿರಂಗಪಡಿಸುವುದು ಅಗತ್ಯವಾಗಿದೆ.ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರತಿವಾದಿಗಳ ಪ್ರಕಾರ, ಪಾಲಿಸಿಯನ್ನು ಪಡೆಯುವ ಸಮಯದಲ್ಲಿ ಸಹ ಮೃತನು ಮಧುಮೇಹ ಮತ್ತು ಹೃದ್ರೋಗದಿಂದ ಬಳಲುತ್ತಿದ್ದನು ಮತ್ತು ಅದನ್ನು ಆತನು ಅಡಗಿಸಿದ್ದಾನೆ.

ಈಗಾಗಲೇ ಮೇಲೆ ಅಭಿಪ್ರಾಯಪಟ್ಟಿರುವಂತೆ, ಮಧುಮೇಹ ಹಾಗೂ ಹೃದಯ ಮತ್ತು ಶ್ವಾಸಕೋಶಕ್ಕೆ ಸಂಬಂಧಿಸಿದ ಯಾವುದೇ ಕಾಯಿಲೆಗಳನ್ನು ಪ್ರಸ್ತಾವಕಾರನು/ವಿಮಾದಾರನು ಪ್ರಸ್ತಾವನೆಯಲ್ಲೇ ಬಹಿರಂಗಪಡಿಸಬೇಕಾದ ಅಗತ್ಯವಿದ್ದು, ಅದು ನಿಶಾನೆ ಪಿ .19 ರಲ್ಲಿದೆ.ಒಪ್ಪಿಕೊಂಡಿರುವಂತೆ, ವಿಮೆದಾರನು ಅಂಥ ಯಾವುದೇ ಅನಾರೋಗ್ಯಗಳಿಂದ ತಾನು ಬಳಲುತ್ತಿರಲಿಲ್ಲವೆಂದು ಹೇಳಿ ನಕಾರಾತ್ಮಕವಾಗಿ ಸದರಿ ಅಂಕಣಗಳಿಗೆ ಉತ್ತರಿಸಿರುತ್ತಾನೆ.ಆ ಸಂಬಂಧದಲ್ಲಿ, ಪಿ.ಡಬ್ಲ್ಯು .1-ಕೋಮುದಾರಳು ತನ್ನ ಮುಖ್ಯ ವಿಚಾರಣೆಯಲ್ಲಿ, ಆಕೆಯ ಪತಿಯು ತನ್ನ ಜೀವದ ಮೇಲಿನ ವಿಮಾ ರಕ್ಷಣೆಗೆ ಮೊದಲು ಮತ್ತು ನಂತರ ಸಹ ಗಟ್ಟಿಮುಟ್ಟಾಗಿದ್ದನೆಂದು ಮತ್ತು ಆರೋಗ್ಯವಂತನಾಗಿದ್ದನೆಂದು ಹೇಳಿದ್ದಾಳೆ.ಆದಾಗ್ಯೂ, ಆಕೆಯ ಪಾಟಿ ಸವಾಲಿನಲ್ಲಿ, ಆಕೆಯ ಪತಿಯು ಪಾಲಿಸಿಯನ್ನು ತೆಗೆದುಕೊಳ್ಳುವ ಮೊದಲು ಮಧುಮೇಹ ಕಾಯಿಲೆ ಹೊಂದಿದ್ದನು ಎಂಬ ನಿರ್ದಿಷ್ಟ ಸೂಚನೆಗೆ ಸಂಬಂಧಿಸಿದಂತೆ ಅದು ' ಸತ್ಯ ' ಎಂಬ ಸಂಗತಿಯನ್ನು ಒಪ್ಪಿಕೊಂಡಿದ್ದಾಳೆ.ಹಾಗಾಗಿ, ವಿಮೆ ಪಾಲಿಸಿಯನ್ನು ತೆಗೆದುಕೊಳ್ಳುವ ಮೊದಲು ಸಹ ಆಕೆ ಪತಿಯು ಮಧುಮೇಹ ರೋಗಿಯಾಗಿದ್ದನು ಎಂಬುದನ್ನು ಆಕೆಯು ಒಪ್ಪಿಕೊಂಡಿದ್ದಾಳೆ.

ಇದಲ್ಲದೆ, ವಿಮೆದಾರನು ಹೃದ್ರೋಗ ಮತ್ತು ಮಧುಮೇಹದಿಂದ ಬಳಲುತ್ತಿದ್ದನು ಎಂಬ ಡಿ.ಡಬ್ಲ್ಯು.ಇವರ ಸಾಕ್ಷ್ಯದ ಹೊರತಾಗಿ, ವಿಮಾದಾರನ ಮರಣವು ತೀವ್ರವಾದ ಕೆಳ ಕೋಶ ಹೃದಯ ಸ್ನಾಯುವಿನ ಮುರಿತದಿಂದ, (acute inferior wall myocardial intraction) airpos do J ಮಧುಮೇಹ ಮೆಲಿಟಸ್'ನಿಂದ ಆಗಿತ್ತೆಂದು ಅವರು ಹೇಳಿದ್ದಾರೆ.ಇದಕ್ಕೆ ಸಮರ್ಥನೆಯಾಗಿ ಅವರು, ನಿಶಾನೆ ಡಿ .1 ರಿಂದ ಡಿ .3 ಯಲ್ಲಿರುವ ಮೂರು ದಸ್ತಾವೇಜುಗಳನ್ನು ಹಾಜರುಪಡಿಸಿದ್ದಾರೆ.ದಿನಾಂಕ: 26.03.2002 ರಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬೆಂಗಳೂರು ದಕ್ಷಿಣ ಇವರು ಎರಡನೇ ಪ್ರತಿವಾದಿಗೆ ಬರೆದ ಉತ್ತರ ರೂಪದ ಪತ್ರವಾಗಿರುವ ನಿಶಾನೆ ಡಿ .1 ರಲ್ಲಿ, ಮೃತನು ಕಾರನಿರ್ವಹಿಸುತ್ತಿದ್ದ ಕಚೇರಿ ಮತ್ತು ಅಧೀನ ನೌಕರನಾಗಿದ್ದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ದಿನಾಂಕ: 22.07.1996 ರಿಂದದಿನಾಂಕ: 21.09.1996 ರ ಅವಧಿಗಾಗಿ ಶ್ರೀ ಸಿದ್ದರಾಜು (ಮೃತ) 62 ದಿನಗಳ ಪರಿತವರ್ತಿತ ರಜೆ ಪಡೆದಿದ್ದನು ಮತ್ತು ಸದರಿ ಅವಧಿಯಲ್ಲಿ ಆತನು ಜಯದೇವ ಹೃದಯ ವಿಜ್ಞಾನ ಸಂಸ್ಥೆಯಲ್ಲಿ ಚಿಕಿತ್ಸೆಗಾಗಿ ಸೇರಿಕೊಂಡಿದ್ದನು ಎಂದು ಹೇಳಿದ್ದಾರೆ.ಸದರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮೃತ ಸಿದ್ದರಾಜು ಪಡೆದುಕೊಂಡಿದ್ದ ವೈದ್ಯಕೀಯ ರಜೆಯ ವಿವರಗಳ ಪ್ರತಿಯನ್ನು ಸಹ ಲಗತ್ತಿಸಿದ್ದಾರೆ.ಸದರಿ ದಸ್ತಾವೇಜು ನಿಶಾನೆ ಡಿ .2 ರಲ್ಲಿದ್ದು,ದಿನಾಂಕ: 22.7.1996 ರಿಂದ 21.9.1996 ರವರೆಗಿನ 62 ದಿನಗಳ ಅವಧಿಯ ರಜೆಯನ್ನು ನೀಡಲು “ ಕಾರ್ಡಿಯೋಜೆನಿಕ್ನಿಂದಾದ ತೀವ್ರವಾದ ಕೆಳ ಕೋಶ ಹೃದಯ ಸ್ನಾಯುವಿನ ಮುರಿತ ಮತ್ತು ವ್ಯತ್ಯಾಸಗೊಂಡ ಹೃದಯರೋಧ (acute inferior wall myocardial intraction with cardiogeni) ' ಮತ್ತು " ಮಧುಮೇಹ ಮೆಲಿಟಸ್ " ಕಾರಣವೆಂದು ಅದರಿಂದ ಕಂಡುಬರುತ್ತದೆ.ಮೃತ ಸಿದ್ದರಾಜು ಆ ಅವಧಿಗೆ ಪರಿವರ್ತಿತ ರಜೆ ತೆಗೆದುಕೊಂಡಿದ್ದನು.ಸಂಶಯಕ್ಕೆಡೆ ಇಲ್ಲದಂತೆ, ಸದರಿ ರಜೆಯನ್ನು ವಿಮೆ ಪಡೆಯುವ ಸುಮಾರು ಮೂರು ವರ್ಷಗಳ ಮೊದಲು ಪಡೆಯಲಾಗಿತ್ತು; ಹಾಗಾಗಿ, ಪಾಲಿಸಿಯ ದಿನಾಂಕದಂದು ಪ್ರಸ್ತಾವಕಾರನು/ವಿಮೆದಾರನು ಯಾವುದೇ ಅನಾರೋಗ್ಯವನ್ನು ಹೊಂದಿರಲಿಲ್ಲ ಎಂಬುದನ್ನು ಪ್ರತಿವಾದಿಗಳ ಕಡೆಯಿಂದ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಗಿದೆ.ಆದಾಗ್ಯೂ, ಮೇಲೆ ಈಗಾಗಲೇ ಅಭಿಪ್ರಾಯಪಟ್ಟಿರುವಂತೆ, ಸದರಿ ಪ್ರಸ್ತಾವಕಾರನು/ವಿಮೆದಾರನು ಘೋಷಿಸಬೇಕಾಗಿರುವ ನಿಶಾನೆ ಪಿ .19 ರಲ್ಲಿ ಪ್ರಸ್ತಾವಕಾರನು ಘೋಷಣೆಯನ್ನು ಮಾಡಿದ್ದನು ಹಾಗೂ ಮೃತ ಸಿದ್ದರಾಜು ತಾನು ಉತ್ತಮ ಆರೋಗ್ಯ ಹೊಂದಿದ್ದಾಗಿ ಮತ್ತು ರೋಗಮುಕ್ತನಾಗಿದ್ದಾಗಿ ಹಾಗೂ ಕಳೆದ ಮೂರು ವರ್ಷಗಳಲ್ಲಿ ಆತನಿಗೆ ಯಾವುದೆ ಗಂಭೀರ ಅನಾರೋಗ್ಯವಿರಲಿಲ್ಲವೆಂದು ಘೋಷಿಸಿರುವನು ಎಂಬ ಕಾರಣವು ಅಂಗೀಕಾರಾರ್ಹವಾಗಿರುವುದಿಲ್ಲ ಎಂಬುದು ಸದರಿ ವಾದವಾಗಿದೆ.ಸದರಿ ಪ್ರಸ್ತಾವವನ್ನು ಆತನು ಸಲ್ಲಿಸಿದ್ದು, ಅದರ ದಿನಾಂಕ 28.6.1999 ಎಂದಿದೆ.ಆತನು ಪಡೆದುಕೊಂಡ 62 ದಿನಗಳ ಪರಿವರ್ತಿತ ರಜೆಯ ಅವಧಿಯು, ನಿಶಾನೆ ಪಿ .19 ರಲ್ಲಿನ ಪ್ರಸ್ತಾವನೆಯ ಸದರಿ ದಿನಾಂಕಕ್ಕೆ ಮೊದಲು ಮೂರು ವರ್ಷಗಳ ಅವಧಿಯೊಳಗಿದೆ.ಹಾಗಾಗಿ, ಅದು ಪ್ರಸ್ತಾವನೆ

ಸಲ್ಲಿಸುವುದಕ್ಕೆ ಮುಂಚಿನ ಮೂರು ವರ್ಷಗಳ ಪರಿಶೀಲನಾ ಅವಧಿಯೊಳಗಿದೆ.ಮೃತನು ಎರಡೂ ಕಾಯಿಲೆಗಳಿಗೆ ಎಂದರೆ ಹೃದ್ರೋಗ ಮತ್ತು ಮಧುಮೇಹ ರೋಗಗಳೆರಡಕ್ಕೂ 62 ದಿನಗಳ ದೀರ್ಘ ರಜೆಯನ್ನು ಪಡೆದಿದ್ದನು ಎಂಬುದು ನಿಶಾನೆ ಡಿ .2 ರಲ್ಲಿನ ದಸ್ತಾವೇಜಿನಿಂದ ತಿಳಿದುಬರುತ್ತದೆ.

ವಕ್ಕಾರ್ಡ್ ಆಸ್ಪತ್ರೆ ಮತ್ತು ಹೃದಯ ಸಂಸ್ಥೆ, ಕನ್ನಿಂಗ್ಹ್ಯಾಮ್ ರಸ್ತೆ, ಬೆಂಗಳೂರು ಇವರು ನೀಡಿದ ಮರಣ ಪ್ರಮಾಣಪತ್ರವಾಗಿರುವ ನಿಶಾನೆ ಡಿ .3 ರಿಂದ ಸಹ, ಸದರಿ ಆಸ್ಪತ್ರೆಯಲ್ಲಿ ರೋಗಿಯಾಗಿದ್ದ ಮತ್ತುದಿನಾಂಕ: 26.12.2001 ರಂದು ಮೃತನಾಗಿದ್ದ ಸದರಿ ಸಿದ್ದರಾಜು, ಮುಖ್ಯವಾಗಿ ರಕ್ತ ಕೊರತೆಯ ಹೃದ್ರೋಗ-ತೀವ್ರವಾದ ಕೆಳ ಕೋಶ ಹೃದಯ ಸ್ನಾಯುವಿನ ಮುರಿತ ಮತ್ತು ಮಧುಮೇಹ ಮೆಲಿಟಸ್ನಿಂದ ಸಾವಿಗೀಡಾದನೆಂದು ತಿಳಿದುಬರುತ್ತದೆ.ಮೃತನು/ವಿಮೆದಾರನು 1996 ನೇ ಸಾಲಿನಲ್ಲಿ 62 ದಿನಗಳ ರಜೆಯನ್ನು ಪಡೆದಿದ್ದಕ್ಕೆ ಹೃದಯ ಸಮಸ್ಯೆ ಮತ್ತು ಮಧುಮೇಹ ಕಾರಣವಾಗಿದ್ದು, ಆ ಕಾಯಿಲೆಗಳುದಿನಾಂಕ: 26.12.2001 ರಂದು ಆತನು ಮರಣ ಹೊಂದುವವರೆಗೂ ಇದ್ದು, ಮುಂದುವರಿದಿತ್ತು ಎಂಬುದು ಇದರಿಂದ ಸ್ಪಷ್ಟವಾಗಿ ತಿಳಿಯುತ್ತದೆ.ಹಾಗಾಗಿ, ಆತನ ಪ್ರಸ್ತಾವನೆಯನ್ನು ಸಲ್ಲಿಸಿದ ದಿನಾಂಕದಂದು ಸಹ ಪ್ರಸ್ತಾವಕಾರ/ಸಿದ್ದರಾಜು ಹೃದ್ರೋಗದಿಂದ ಮತ್ತು ಮಧುಮೇಹ ಮೆಲಿಟಸ್ನಿಂದ ಮುಕ್ತನಾಗಿರಲಿಲ್ಲ.ಆತನ ಪ್ರಸ್ತಾವನೆಯ ದಿನಾಂಕದಂದು ಆತನು ಬಳಲುತ್ತಿದ್ದ ಅನಾರೋಗ್ಯಗಳನ್ನು ಆತನು ಬಹಿರಂಗಪಡಿಸಿರಲಿಲ್ಲವಾದ್ದರಿಂದ ಮತ್ತು ಇದಕ್ಕೆ ತದ್ವಿರುದ್ಧವಾಗಿ, ತಾನು ಆರೋಗ್ಯದಿಂದಿರುವುದಾಗಿ ಹಾಗೂ ಹೃದಯ ಮತ್ತು ಮಧುಮೇಹಗಳಿಗೆ ಸಂಬಂಧಿಸಿದ ಯಾವುದೇ ಕಾಯಿಲೆಯನ್ನು ಒಳಗೊಂಡಂತೆ ಯಾವುದೇ ರೀತಿಯ ಅನಾರೋಗ್ಯದಿಂದ ತಾನು ಬಳಲುತ್ತಿಲ್ಲವೆಂದು ಹೇಳಿ ನಕಾರಾತ್ಮಕವಾಗಿ ಪ್ರಸ್ತಾವನೆ ನಮೂನೆಯಲ್ಲಿನ ಅಂಶ ಸಂಖ್ಯೆ 16 ಕ್ಕೆ ಆತನು ಉತ್ತರಿಸಿರುವುದರಿಂದ, ಪಾಲಿಸಿಯನ್ನು ಪಡೆಯುವಾಗ ಮತ್ತು ಆ ಸಂಬಂಧದಲ್ಲಿ ತನ್ನ ಪ್ರಸ್ತಾವನೆಯನ್ನು ಸಲ್ಲಿಸುವಾಗ, ಮುಖ್ಯ ಸಂಗತಿಗಳನ್ನು ವಿಮಾಕರ್ತನ ( 2 ನೇ ಪ್ರತಿವಾದಿ) ಗಮನಕ್ಕೆ ತಾರದೆ ಅವರಿಂದ ಮುಚ್ಚಿಟ್ಟಿದ್ದನು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

19. ಮುಖ್ಯ ಸಂಗತಿಯನ್ನು ಅಡಗಿಸಿದ್ದರಿಂದ, ಪ್ರತಿವಾದಿ ಸಂಖ್ಯೆ 2 ಇವರು ಒಪ್ಪಂದವನ್ನು ಅಸಿಂಧುವೆಂದು ಪರಿಗಣಿಸಲು ಮತ್ತು ವಿಮೆದಾರನು ಸಂಬಂಧದಲ್ಲಿ ಮಾಡಿದ ಎಲ್ಲಾ ಸಂದಾಯಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಪ್ರಾಧಿಕಾರಕ್ಕೆ ಅಧಿಕಾರ ನೀಡುವ 7 ನೇ ನಿಯಮದ ಅಡಿಯಲ್ಲಿ ಅವರ ಅಧಿಕಾರವನ್ನು ಚಲಾಯಿಸಿದ್ದಾರೆ.

20. ಇಂಥಹುದೇ ಸಂದರ್ಭದಲ್ಲಿ, ಸತ್ವಂತ್ ಕೌರ್ ಸಂಧು (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವಿಮಾದಾರನು ವೈದ್ಯಕೀಯ ಕ್ಲೇಮಿನ ನಿರಾಕರಣೆ ಕುರಿತು ಎತ್ತಿದ ಪ್ರಶ್ನೆಯನ್ನು ಪರಿಗಣಿಸುವಾಗ, ವಿಮಾ ಒಪ್ಪಂದ ಎಂದರೆ ಏನು ಮತ್ತು ಮುಖ್ಯ ಸಂಗತಿಯನ್ನು ಅಡಗಿಸುವುದು ಎಂದರೆ ಏನು ಎಂಬುದನ್ನು ವಿಶದವಾಗಿ ವಿವರಿಸಿದೆ.ಸದರಿ ತೀರ್ಪುಗಳಲ್ಲಿನ ಸುಸಂಗತ ಉದ್ಧತ ಭಾಗವು ಈ ಕೆಳಗಿನಂತಿದೆ:

"18. ಮೆಡಿಕ್ಲೇಮ್ ಪಾಲಿಸಿಯು ಒಂದು ಜೀವ ವಿಮೆಯಲ್ಲದ ಪಾಲಿಸಿಯಾಗಿದ್ದು, ಗಾಯ, ಅಪಘಾತ ಮತ್ತು ಆಸ್ಪತ್ರೆಗೆ ಸೇರಿದ್ದಕ್ಕೆ ಸಂಬಂಧಪಟ್ಟ ಕೆಲವು ವೆಚ್ಚಗಳ ಸಂಬಂಧದಲ್ಲಿ ಪಾಲಿಸಿಧಾರಕನಿಗೆ ಆ ವೆಚ್ಚವನ್ನು ಭರಿಸುವ ಭರವಸೆಯನ್ನು ಈಡೇರಿಸುತ್ತದೆ.ಅದೇನೆ ಇರಲಿ, ಇದು ಸಂಪೂರ್ಣ ನಂಬಿಕೆಯ ಒಪ್ಪಂದದ ಪ್ರವರ್ಗದಲ್ಲಿ ಬರುವ ವಿಮಾ ಒಪ್ಪಂದವಾಗಿದ್ದು, ವಿಮಾದಾರನ ಕಡೆಯಿಂದ ಅದು ಪರಮ ಸದುದ್ದೇಶದ ಒಪ್ಪಂದವೆಂದು ಅದರರ್ಥ.ಹಾಗಾಗಿ, ಪ್ರಸ್ತಾವನಾ ನಮೂನೆಯಲ್ಲಿ ನಿರ್ದಿಷ್ಟ ಅಂಶ ಕುರಿತು ಮಾಹಿತಿಯನ್ನು ಕೇಳಿದಾಗ, ವಿಮಾದಾರನು, ತನಗೆ ತಿಳಿದಿರುವ ವಿಷಯ ಕುರಿತ ಮಾಹಿತಿಯನ್ನು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಬಹಿರಂಗಪಡಿಸುವ ಶ್ರದ್ಧಾಪೂರ್ವಕ ಬಾಧ್ಯತೆಗೆ ಒಳಗಾಗುತ್ತಾನೆ.ಪಾಲಿಸಿಯ ಉದ್ದೇಶಕ್ಕಾಗಿ ಕೋರಿದ ಮಾಹಿತಿಯು ಮುಖ್ಯವೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸುವುದು ಪ್ರಸ್ತಾವಕಾರನಲ್ಲ.ಸಹಜವಾಗಿಯೇ, ಅರ್ಜಿದಾರನಿಗೆ ಗೊತ್ತಿರುವ ಸಂಗತಿಗಳಿಗೆ ಮಾತ್ರವೇ ಬಹಿರಂಗಪಡಿಸುವ ಬಾಧ್ಯತೆಯು ಅನ್ವಯವಾಗುತ್ತದೆಯೇ ಹೊರತು ಆತನಿಗೆ ಏನು ಗೊತ್ತಿರಬೇಕಿತ್ತು ಎಂಬುದಕ್ಕಲ್ಲ.ಮಾಹಿತಿ ಬಹಿರಂಗಪಡಿಸುವ ಬಾಧ್ಯತೆಯು ಒಬ್ಬನಿಗೆ ಗೊತ್ತಿರುವ ಅರಿವನ್ನು ಅವಲಂಬಿಸಿರುತ್ತದೆ.ಆ ಅರಿವಿನ ಪ್ರಾಮುಖ್ಯತೆಯ ಬಗೆಗಿನ ಆತನ ಅಭಿಪ್ರಾಯವು ಮಹತ್ವದ್ದಾಗುವುದಿಲ್ಲ.

22. " ಮುಖ್ಯ ಸಂಗತಿ " ಎಂಬ ಪದವನ್ನು ಅಧಿನಿಯಮದಲ್ಲಿ ಪರಿಭಾಷಿಸಿರುವುದಿಲ್ಲವಾದ್ದರಿಂದ, ವಿಮಾ ಕ ಂ ತನ್ನು ನಿಗದಿಪಡಿಸುವಲ್ಲಿ ವಿಮಾಕರ್ತನಿಗೆ ವಿವೇಚನಾಯುತ ತೀರ್ಮಾನ ಕೈಗೊಳ್ಳುವುದರ ಮೇಲೆ ಅಥವಾ

ಆತನು ಅಪಾಯ ಸಾಧ್ಯತೆಯನ್ನು ಅಂಗೀಕರಿಸಬಯಸುವನೇ ಎಂಬುದನ್ನು ನಿರ್ಣಯಿಸಲು ಪ್ರಭಾವ ಬೀರುವ ಯಾವುದೇ ಸಂಗತಿ ಎಂದು ಅರ್ಥ ಬರುವ ಹಾಗೆ ಸಾಮಾನ್ಯ ಪದಗಳಲ್ಲಿ ನ್ಯಾಯಾಲಯಗಳು ಅದನ್ನು ಅರ್ಥ ಮಾಡಿಕೊಂಡಿವೆ ಮತ್ತು ವಿವರಿಸಿವೆ.ವಿಮಾ ಒಪ್ಪಂದದ ಮೂಲಕ್ಕೆ ಹೋಗುವ ಮತ್ತು ಒಳಗೊಂಡಿರುವ ಅಪಾಯ ಸಾಧ್ಯತೆಗೆ ಸಂಬಂಧಿಸಿರುವ ಯಾವುದೇ ಸಂಗತಿಯು " ಮುಖ್ಯವಾಗುವುದು.

25. ಇಡೀ ಚರ್ಚೆಯ ಇತ್ಯರ್ಥವೆಂದರೆ, ವಿಮಾ ಒಪ್ಪಂದದಲ್ಲಿ, ಅಪಾಯ ಸಾಧ್ಯತೆಯನ್ನು ಅಂಗೀಕರಿಸುವ ಅಥವಾ ಅಂಗೀಕರಿಸದೆ ಇರುವ ನಿರ್ಧಾರದಲ್ಲಿ ವಿವೇಚನಾವಂತ ವಿಮಾಕರ್ತನ ಮನಸ್ಸಿನ ಮೇಲೆ ಪರಿಣಾಮ ಬೀರುವ ಯಾವುದೇ ಸಂಗತಿಯು " ಮುಖ್ಯ ಸಂಗತಿ " ಯಾಗಿರುತ್ತದೆ.ಪ್ರಸ್ತಾವಕಾರನಿಗೆ ಅಂಥ ಸಂಗತಿಯ ಅರಿವಿದ್ದರೆ, ನಿರ್ದಿಷ್ಟವಾಗಿ ಪ್ರಸ್ತಾವನಾ ನಮೂನೆಯಲ್ಲಿನ ಪ್ರಶ್ನೆಗಳಿಗೆ ಉತ್ತರಿಸುವಾಗ ಅದನ್ನು ಬಹಿರ ಂ ಗಪಡಿಸಲು ಆತನು ಬದ್ಧನಾಗಿರುತ್ತಾನೆ.ಯಾವುದೇ ನಿಖರವಲ್ಲದ ಉತ್ತರವು, ಪ್ರಸ್ತಾವನಾ ನಮೂನೆಯಲ್ಲಿ ಕೋರಿರುವ ಯಾವುದೇ ಮಾಹಿತಿಯು, ವಿಮಾ ಒಪ್ಪಂದ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮುಖ್ಯವಾಗುತ್ತದೆ ಎಂಬ ಸ್ಪಷ್ಟ ಪೂರ್ವಭಾವನೆ ಇರುವುದರಿಂದ ವಿಮಾಕರ್ತನ ಎ ಹೊಣೆಗಾರಿಕೆಯನ್ನು ನಿರಾಕರಿಸಲು ಆತನಿಗೆ ಹಕ್ಕು ನೀಡುವುದು ಎಂದು ಒತ್ತಿ ಹೇಳುವ ಅವಶ್ಯಕತೆಯಿಲ್ಲ. "

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲಿನ ತೀರ್ಪು ಪ್ರಸ್ತುತ ಮೊಕದ್ದಮೆಗೆ ಯಥಾವತ್ತಾಗಿ ಅನ್ವಯಿಸುತ್ತದೆ.ಈಗಾಗಲೇ ಅಭಿಪ್ರಾಯಪಟ್ಟಿರುವಂತೆ, ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಸ್ತಾವಕಾರ ಸಿದ್ದರಾಜು ಹೃದಯ ಸಂಬಂಧಿ ಅನಾರೋಗ್ಯ ಮತ್ತು ಮಧುಮೇಹದಿಂದ ಬಳಲುತ್ತಿದ್ದನು ಎಂಬ ಸಂಗತಿಯ ಹೊರತಾಗಿ, ಅಂಥ ಯಾವುದೇ ಅನಾರೋಗ್ಯಗಳ ಬಗ್ಗೆ ವ್ಯಕ್ತವಾಗಿ ಬಹಿರಂಗಪಡಿಸಬೇಕಾದ ಅಗತ್ಯವಿದ್ದ ಮಾಹಿತಿಯನ್ನು ಆತನು ತನ್ನ ಪ್ರಸ್ತಾವನೆಯಲ್ಲಿ ಬಹಿರಂಗಪಡಿಸಿರುವುದಿಲ್ಲ ಮತ್ತು ಹಾಗಾಗಿ ಆತನು ವಿಮಾದಾರನ ಅರಿವಿಗೆ ಮತ್ತು ಗಮನಕ್ಕೆ ಬಂದ ಮುಖ್ಯ ಸಂಗತಿಯನ್ನು ಅಡಗಿಸಿದ್ದಾನೆ.ಹಾಗಾಗಿ, ಸತ್ವಂತ್ ಕೌರ್ ಸಂಧು (ಮೇಲೆ ಹೇಳದ) ಮೊಕದ್ದಮೆಯಲ್ಲಿ ಮತ್ತು ಪ್ರಸ್ತುತ ಮೊಕದ್ದಮೆಯಲ್ಲೂ ಸಹ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದಂತೆ, ಅದರ ಮುಂದೆ ವಾದಿಯು ಚ ಮಂಡಿಸಿದ ವಿಮಾ ಕೇಮನ್ನು ನಿರಾಕರಿಸುವಲ್ಲಿ ಎರಡನೇ ಪ್ರತಿವಾದಿಯ ಯಾವುದೇ ತಪ್ಪು ಕಂಡುಬರುವುದಿಲ್ಲ.ಆದಾಗ್ಯೂ, ವಿಚಾರಣಾ ನ್ಯಾಯಾಲಯವು ಈ ಪುರಾವೆಯ ಮತ್ತು ಸಾಕ್ಷ್ಯದ ಗುಣಾರ್ಹತೆಗಳನ್ನು ತನ್ನ ಯುಕ್ತ ದೃಷ್ಟಿಕೋನದಿಂದ ವಿವೇಚಿಸದೆ, 0 ಆರೋಪಿಸಲಾದ ಹೃದಯ ಸಮಸ್ಯೆಯು ಮೂರು ವರ್ಷ ಹಳೆಯದಾಗಿತ್ತು ಮತ್ತು ಹಾಗಾಗಿ ಅದನ್ನು ಪ್ರಸ್ತಾವನೆಯ ದಿನಾಂಕದಂದು ಇದ್ದಂತೆ ಪ್ರಸ್ತುತ 0 ಇರುವ ಹೃದ್ರೋಗವೆಂದು ಪರಿಗಣಿಸಲಾಗುವುದಿಲ್ಲ ಎಂಬ ಅದರದೇ ಆದ ಪರಿಗಣನೆಯನ್ನು ಆಧರಿಸಿದೆ.ಇದಲ್ಲದೆ, ಜಯದೇವ ಆಸ್ಪತ್ರೆಯಲ್ಲಿ ಮೃತನಿಗೆ ಚಿಕಿತ್ಸೆ ನೀಡಿರುವರೆಂದು ಮತ್ತು ಮರಣ ಪ್ರಮಾಣಪತ್ರವನ್ನು ನೀಡಿರುವರೆಂದು ಹೇಳಲಾದ ವೈದ್ಯರನ್ನು ವಿಚಾರಣೆಗೊಳಪಡಿಸಿಲ್ಲ ಎಂದು ಅಭಿಪ್ರಾಯಪಡುವ ಮೂಲಕ ಅದು ತಪ್ಪೆಸಗಿದೆ.ನಿಶಾನೆ ಡಿ .1 ರಿಂದ ಡಿ .3 ರವರೆಗಿನ ಯಾವ ದಸ್ತಾವೇಜುಗಳನ್ನು ವಿವಾದಕ್ಕೊಳಪಡಿಸಿರುವುದಿಲ್ಲ ಅಥವಾ ವಿಚಾರಣಾ ನ್ಯಾಯಾಲಯದಲ್ಲಿ ವಾದಿಯು ಪ್ರಶ್ನಿಸಿಲ್ಲ ಎಂಬ ಕಾರಣಕ್ಕಾಗಿ ಸದರಿ ಅಭಿಪ್ರಾಯಕ್ಕೆ ಬರುವುದು ಸರಿಯಾದುದಲ್ಲ.ನಿಶಾನೆ ಡಿ .1 ರಿಂದ ಡಿ .3 ರವರೆಗಿನ ವಾದಗಳು ತಪ್ಪಾಗಿವೆ ಎಂಬ ವಿಷಯವನ್ನು ಅವರು ಪ್ರಸ್ತಾಪಿಸಿರುವುದಿಲ್ಲ.ಇನ್ನೊಂದೆಡೆ, ಮೇಲೆ ಈಗಾಗಲೇ ಅಭಿಪ್ರಾಯಪಟ್ಟಿರುವಂತೆ, ಮೃತನ ಮಡದಿಯಾಗಿರುವ ಪಿ.ಡಬ್ಲ್ಯು.ಸ್ವತಃ ತನ್ನ ಪತಿ ಸಿದ್ದರಾಜು ವಿಮಾ ಪಾಲಿಸಿಯನ್ನು ಪಡೆದುಕೊಳ್ಳುವ ಮೊದಲೇ ಮಧುಮೇಹದಿಂದ ಬಳಲುತ್ತಿದ್ದನು ಎಂಬುದನ್ನು ಒಪ್ಪಿಕೊಂಡಿದ್ದಾಳೆ.ವಿಚಾರಣಾ ನ್ಯಾಯಾಲಯವು ಸದರಿ ಮುಖ್ಯ ಅಂಶವನ್ನು ಪರಿಗಣಿಸದಿರುವುದು ದಾವೆಯನ್ನು ಡಿಗ್ರಿಗೊಳಿಸುವುದಕ್ಕೆ ಕಾರಣವಾಗಿದೆ.ಈಗ ಸದರಿ ನಿರ್ಣಯವು ತಪ್ಪಾಗಿದೆ ಎಂದು ಕಂಡುಬಂದಿರುವುದರಿಂದ, ಅದನ್ನು ತಳ್ಳಿಹಾಕಬೇಕಾದ ಅಗತ್ಯವಿದೆ.

21. ತದನುಸಾರವಾಗಿ, ನಾನು ಈ ಮುಂದಿನ ಆದೇಶವನ್ನು ಹೊರಡಿಸುತ್ತಿದ್ದೇನೆ:

ಆದೇಶ

ಅಪೀಲನ್ನು ಪುರಸ್ಕರಿಸಲಾಗಿದೆ.ಒ.ಎಸ್.ಸಂಖ್ಯೆ: 4391/2005 ರಲ್ಲಿ 42 ನೇ ಹೆಚ್ಚು ವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ಹೊರಡಿಸಿದದಿನಾಂಕ: 9.7.2010 ರ ತೀರ್ಪು ಮತ್ತು ಡಿಕ್ರಿಯನ್ನು ತಳ್ಳಿಹಾಕಲಾಗಿದೆ.ಒ.ಎಸ್.ಸಂಖ್ಯೆ: 4391/2005 ರಲ್ಲಿ ವಾದಿಯ ದಾವೆಯನ್ನು ವಜಾಗೊಳಿಸಲಾಗಿದೆ.

ರಿಜಿಸ್ಟ್ರಿಯವರು ವಿಳಂಬವಿಲ್ಲದೆ ವಿಚಾರಣಾ ನ್ಯಾಯಾಲಯದ ದಾಖಲೆಗಳೊಂದಿಗೆ ವಿಚಾರಣಾ ನ್ಯಾಯಾಲಯಕ್ಕೆ ಈ ತೀರ್ಪಿನ ಪ್ರತಿಯನ್ನು ವರ್ಗಾಯಿಸುವುದು.

ಮುಖ್ಯ ಅಪೀಲಿನ ವಿಲೆಯ ದೃಷ್ಟಿಯಿಂದ, ಇತ್ಯರ್ಥದಲ್ಲಿರುವ ಮಧ್ಯಕಾಲೀನ ಅರ್ಜಿಗಳು ಯಾವುವಾದರೂ ಇದ್ದರೆ, ಅವು ಪರಿಗಣನೆಗಾಗಿ ಉಳಿಯುವುದಿಲ್ಲ.